ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/01/ಸಿಎಎಸ್/2020-21/ಬಸ್ಥಾವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 20.05.2022

## ಸುತ್ತೋಲೆ

**ವಿಷಯ :** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು / ಗ್ರಂಥಪಾಲಕರು /ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ವಿವಿಧ ಶೈಕ್ಷಣಿಕ ಹಂತಗಳಿಗೆ ವೃತ್ತಿ ಪದೋನ್ನತಿ ಮಂಜೂರು ಮಾಡುವ ಸಂಬಂಧ ಆಯ್ಕೆ-ಎ / ಆಯ್ಕೆ-ಬಿ ನಮೂನೆಗಳಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು.

**ಉಲ್ಲೇಖ :**
1. ಸರ್ಕಾರದ ದಿನಾಂಕ : 02.03.2021 ರ ಸಂಖ್ಯೆ : ಇಡಿ/123/ಡಿಸಿಇ/2020ರ ಆದೇಶ
2. ಈ ಕಛೇರಿಯ ದಿನಾಂಕ : 16.03.2021ರ ಸಮಸಂಖ್ಯೆಯ ಪರಿಚಲನಾ ಆದೇಶ.
3. ಈ ಕಛೇರಿಯ ದಿನಾಂಕ : 13.08.2021 ಸಮಸಂಖ್ಯೆಯ ಸುತ್ತೋಲೆ.
4. ಈ ಕಛೇರಿಯ ದಿನಾಂಕ : 29.12.2021 ಸಮಸಂಖ್ಯೆಯ ಸುತ್ತೋಲೆ.
5. ಈ ಕಛೇರಿಯ ದಿನಾಂಕ: 03.10.2015 ಹಾಗೂ 31.10.2015 ರ ಸಂಖ್ಯೆ: ಕಾಶಿಇ/16/ಸಿಎಎಸ್/ ಉಬಡ್ತಿ/2015-16/ಬಸ್ಥಾವಿ.
6. ಈ ಕಛೇರಿಯ ದಿನಾಂಕ: 19.05.2015 ರ ಸಂಖ್ಯೆ: ಕಾಶಿಇ/27/ಸಿಎಎಸ್/2010-11/ಬಸ್ಥಾವಿ

** ** **

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ವಿವಿಧ ಶೈಕ್ಷಣಿಕ ಹಂತಗಳಿಗೆ (ಶೈಕ್ಷಣಿಕ ಹಂತ 11/ ಶೈಕ್ಷಣಿಕ ಹಂತ 12/ ಶೈಕ್ಷಣಿಕ ಹಂತ 13ಎ/ ಶೈಕ್ಷಣಿಕ ಹಂತ 14) ವೃತ್ತಿ ಪದೋನ್ನತಿ ಮಂಜೂರು ಮಾಡುವ ಸಲುವಾಗಿ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಕಳುಹಿಸುವಂತೆ ಉಲ್ಲೇಖ (03) ಮತ್ತು (04)ರ ಸುತ್ತೋಲೆಗಳಲ್ಲಿ ತಿಳಿಸಲಾಗಿತ್ತು. ಸದರಿ ಸುತ್ತೋಲೆಗಳಲ್ಲಿ ಪ್ರಸ್ತಾವನೆಯನ್ನು ಕಳುಹಿಸಿಕೊಡುವ ಸಂಬಂಧ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು **(Screening-cum-Evaluation Committee)** ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ. ಹಾಗೂ ಉಲ್ಲೇಖ (01) ರಲ್ಲಿ ಸಮಗ್ರ ಮಾರ್ಗಸೂಚಿಗಳನ್ನು ಸರ್ಕಾರವು ಜಾರಿಗೊಳಿಸಿರುವುದರಿಂದ ಅದರಂತೆ ಕ್ರಮವಹಿಸಲು ಪ್ರಾಂಶುಪಾಲರುಗಳಿಗೆ ಉಲ್ಲೇಖ (02) ರ ಪರಿಚಲನಾ ಆದೇಶದ ಮೂಲಕ ತಿಳಿಸಲಾಗಿರುತ್ತದೆ. ಆದಾಗ್ಯೂ ಕೆಲವು ಕಾಲೇಜುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳು ಉಲ್ಲೇಖ (05) ಮತ್ತು (06) ರಲ್ಲಿ ಯುಜಿಸಿ ನಿಯಮ 2010 ಹಾಗೂ 2016 ರ ಪರಿಷ್ಕೃತ ನಿಯಮದಲ್ಲಿ ತಿಳಿಸಿರುವ ನಮೂನೆಯಲ್ಲಿಯೇ ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು **(Screening-cum-Evaluation Committee)** ಇನ್ನು ಮುಂದೆ ವಿವಿಧ ಶೈಕ್ಷಣಿಕ ಹಂತ (ಶೈಕ್ಷಣಿಕ ಹಂತ 11/ ಶೈಕ್ಷಣಿಕ ಹಂತ 12/ ಶೈಕ್ಷಣಿಕ ಹಂತ 13ಎ/ ಶೈಕ್ಷಣಿಕ ಹಂತ 14)ಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಸ್ಥಾನೀಕರಣಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಉಲ್ಲೇಖ (01) ರ ಯುಜಿಸಿ ಮಾರ್ಗಸೂಚಿ 2018 ರಲ್ಲಿ ತಿಳಿಸಿರುವಂತೆ ಅರ್ಹ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರುಗಳಿಂದ ಆಯ್ಕೆ-ಎ/ ಆಯ್ಕೆ-ಬಿ ನಮೂನೆಯಲ್ಲಿ ಯಾವುದು ಅನ್ವಯಿಸುವುದೋ ಅದನ್ನು ಆಯ್ಕೆ ಮಾಡಿಕೊಂಡು ಪ್ರಸ್ತಾವನೆಗಳನ್ನು ಸಿದ್ದಪಡಿಸಿ ಅಗತ್ಯ ಪೂರಕ ದಾಖಲಾತಿಗಳೊಂದಿಗೆ ಪಡೆದು ಕೂಲಂಕಷವಾಗಿ ಪರಿಶೀಲಿಸಿ ಚೆಕ್‌ಲಿಸ್ಟ್‌ನೊಂದಿಗೆ ಈ ಕಛೇರಿಗೆ ಕಳುಹಿಸಲು ಸೂಚಿಸಲಾಗಿದೆ.

..2

ಉಳಿದಂತೆ ಉಲ್ಲೇಖ (03) ಮತ್ತು (04) ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ. ಪ್ರಸ್ತಾವನೆ ಕಳುಹಿಸುವ ಸಂಧರ್ಭದಲ್ಲಿ ಸದರಿ ಸುತ್ತೋಲೆ/ಮಾರ್ಗಸೂಚಿಗಳಲ್ಲಿ ತಿಳಿಸಿರುವ ನಿಯಮಗಳನ್ನು ಪಾಲಿಸದೇ ಉಲ್ಲಂಘನೆ ಮಾಡಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ತಿರಸ್ಕರಿಸಿ, ಕಾರಣರಾದವರಿಗೆ ಶಿಸ್ತು ಕ್ರಮ ಜರುಗಿಸಲಾಗುವುದು.

20/05/2022

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – **ಮೇಲ್ಕಂಡ ಸುತ್ತೋಲೆಯನ್ನು ತಮ್ಮ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರ ಗಮನಕ್ಕೆ ತರುವಂತೆ ಹಾಗೂ ಇನ್ನು ಮುಂದೆ ಸಿಎಎಸ್ ಅಡಿಯಲ್ಲಿ ಅಕಾಡೆಮಿಕ್ ಲೆವೆಲ್ 11, 12, 13ಎ ಹಾಗೂ 14 ರಲ್ಲಿ ವೃತ್ತಿ ಪದೋನ್ನತಿಗೆ ಪ್ರಸ್ತಾವನೆ ಕಳುಹಿಸುವ ಪೂರ್ವದಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.**

ಪ್ರತಿಯನ್ನು :

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ– ತಮ್ಮ ವ್ಯಾಪ್ತಿಗೆ ಒಳಪಡುವ ಕಾಲೇಜುಗಳ ಪ್ರಾಂಶುಪಾಲರ ಗಮನಕ್ಕೆ ತರುವಂತೆ ಹಾಗೂ ಇನ್ನು ಮುಂದೆ ಕೇಂದ್ರ ಕಛೇರಿಗೆ ಕಳುಹಿಸುವ ಪೂರ್ವದಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲು ತಿಳಿಸಿದೆ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ.
3. ಕಛೇರಿ ಪ್ರತಿ.